ಇ ಮೇಲ್: kajavivi@gmail.com
ಗೊಟಗೋಡಿ ಕಛೇರಿ ದೂರವಾಣಿ: 0836-2255180
ಫ್ಯಾಕ್ಸ್: 0836-2307402

# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

**ಗೊಟಗೋಡಿ, ರಾಷ್ಟ್ರೀಯ ಹೆದ್ದಾರಿ -4, ಶಿಗ್ಗಾವಿ ತಾ. ಹಾವೇರಿ ಜಿ. – 581 205**

ಕ.ಜಾ.ವಿ.ವಿ./ಪ್ರ.ಅ/ಪಿಎಚ್.ಡಿ/2022-23/133

ಕುಲಸಚಿವರು

ದಿನಾಂಕ: 20.07.2023

## ಮರು ಅಧಿಸೂಚನೆ

ವಿಷಯ : 2022-23 ನೇ ಸಾಲಿನ ಪಿಹೆಚ್.ಡಿ ಪದವಿ ಪ್ರವೇಶಾತಿಗಾಗಿ ಅಧಿಸೂಚನೆ ಹೊರಡಿಸುವ ಕುರಿತು.
ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ಕಂಡಿಕೆ :07, ದಿನಾಂಕ : 20.07.2023

2022-23 ನೇ ಸಾಲಿನ ಪಿಎಚ್.ಡಿ. ಪದವಿ (ಪೂರ್ಣಕಾಲಿಕ ಮತ್ತು ಅರೆಕಾಲಿಕ) ಪ್ರವೇಶಾತಿಗೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಪಿಹೆಚ್.ಡಿ ಪದವಿ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿರುವ ವಿಷಯಗಳು ಕೆಳಗಿನಂತಿವೆ:

| ಕ್ರ. ಸಂ | ಕೋರ್ಸ್ | ವಿಷಯ |
|---|---|---|
| 1 | ಪಿಎಚ್.ಡಿ. | ಜಾನಪದ ವಿಜ್ಞಾನ, ಜನಪದ ಧರ್ಮ, ತೌಲನಿಕ ಜಾನಪದ, ಜನಪದ ಸಾಹಿತ್ಯ, ಜನಪದ ಭಾಷೆ, ಜನಪದ ಕಲೆ, ಜನಪದ ಕರಕುಶಲ ಕಲೆ, ಪಾರಂಪರಿಕ ಜ್ಞಾನ ಪದ್ಧತಿ, ಪಾರಂಪರಿಕ ವಿಜ್ಞಾನ ಮತ್ತು ತಂತ್ರಜ್ಞಾನ, ಗ್ರಾಮೀಣ ಅಲಕ್ಷಿತ ಸಮುದಾಯ, ಗ್ರಾಮೀಣ ಮತ್ತು ಬುಡಕಟ್ಟು ಸಮುದಾಯ, ಗ್ರಾಮೀಣ ಮತ್ತು ಬುಡಕಟ್ಟು ಮಹಿಳೆ ಮತ್ತು ಮಕ್ಕಳಾಭಿವೃದ್ಧಿ, ಗ್ರಾಮೀಣ ಮತ್ತು ಬುಡಕಟ್ಟು ಯುವಜನ ಸೇವೆ ಮತ್ತು ಕ್ರೀಡೆ, ಪ್ರವಾಸೋದ್ಯಮ, ಜನಪದ ಸಂವಹನ, ಗ್ರಾಮೀಣ ಮತ್ತು ಬುಡಕಟ್ಟು ಅಭಿವೃದ್ಧಿ, ಗ್ರಾಮೀಣ ಮತ್ತು ಬುಡಕಟ್ಟು ವ್ಯವಹಾರ ಹಾಗೂ ನಿರ್ವಹಣೆ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಪ್ರದರ್ಶನ ಕಲೆ, ದೃಶ್ಯಕಲೆ, ಕನ್ನಡ ಮತ್ತು ಜಾನಪದ, ಇಂಗ್ಲೀಷ್, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಸಮಾಜ ಕಾರ್ಯ, ಜನಪದ ಕೌಶಲ್ಯಾಭಿವೃದ್ಧಿ, ಪಾರಂಪರಿಕ ವಿಜ್ಞಾನ ಮತ್ತು ತಂತ್ರಜ್ಞಾನ, ಮಹಿಳಾ ಅಧ್ಯಯನ, ಬುಡಕಟ್ಟು ಅಧ್ಯಯನ, ಪಾರಂಪರಿಕ ವೈದ್ಯ ಪದ್ಧತಿ, ಯೋಗ, ದೇಶೀ ಕೃಷಿ ಪದ್ಧತಿ. |

ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯ ಮೂಲಕ ಅರ್ಹರಾಗುತ್ತಾರೆ. UGC-CSIR/DBT/ICAR/JRF/SRF/GATE ಪರೀಕ್ಷೆಯಲ್ಲಿ ಪಾಸಾದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆಯಲ್ಲಿ ವಿನಾಯಿತಿ ಇರುತ್ತದೆ. ಆದರೆ, ಆ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳ ಜೊತೆ ಮೌಖಿಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕಾಗಿರುತ್ತದೆ. ಪಿಹೆಚ್.ಡಿ ಪ್ರವೇಶಾತಿಯು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಪಿಹೆಚ್.ಡಿ ಅಧಿನಿಯಮ 2018 ಮತ್ತು ಅದರ ನಂತರದ ತಿದ್ದುಪಡಿಯಂತೆ ಮಾಡಲಾಗುತ್ತದೆ.

ಅಭ್ಯರ್ಥಿಯು ಭರ್ತಿ ಮಾಡಿದ ಅರ್ಹ ಅರ್ಜಿ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಕುಲಸಚಿವರು(ಆಡಳಿತ) ಇವರಿಗೆ ದ್ವಿಪ್ರತಿಗಳಲ್ಲಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗಾಗಿ ಅರ್ಜಿ ಶುಲ್ಕ ರೂ. 2000/- (ರೂ. ಎರಡು ಸಾವಿರ ಮಾತ್ರ) ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ – 1 (ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಪ್ರಮಾಣ ಪತ್ರ ಕಡ್ಡಾಯವಾಗಿ ಸಲ್ಲಿಸತಕ್ಕದ್ದು) ರ ಅಭ್ಯರ್ಥಿಗಳಿಗೆ ರೂ. 1000/- (ರೂ. ಒಂದು ಸಾವಿರ ಮಾತ್ರ) ಗಳಾಗಿರುತ್ತದೆ. ಸದರಿ ಮೊತ್ತವನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಡಿ.ಡಿ.ಪಡೆದು ಅಥವಾ ಪಿಎಚ್.ಡಿ. ಚಲನ್ ಮೂಲಕ **ಹಣಕಾಸು ಅಧಿಕಾರಿಗಳು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ** ಇವರ ಹೆಸರಿಗೆ ಪಾವತಿಸಿ ಅದರ ಮೂಲ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

--2

| ವಿವರ | ದಿನಾಂಕ |
|---|---|
| ಅಂತರ್ಜಾಲದಲ್ಲಿ ಅರ್ಜಿ ಲಭ್ಯವಿರುವ ಪ್ರಾರಂಭ ದಿನಾಂಕ: | 21.07.2023 |
| ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: | 28.07.2023 |
| ಪ್ರವೇಶಾತಿ ಪರೀಕ್ಷೆ ದಿನಾಂಕ: | 05.08.2023 |
| ಪ್ರವೇಶಾತಿ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸುವ ದಿನಾಂಕ: | ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು |
| ಮೌಖಿಕ ಪರೀಕ್ಷೆಯ ದಿನಾಂಕಗಳು: | ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು |
| ಕ್ರೋಢೀಕೃತ ಮೆರಿಟ್ ಪಟ್ಟಿ ಪ್ರಕಟಣೆ: | ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು |
| ಮಾರ್ಗದರ್ಶಕರ ಹಂಚಿಕೆಯ ಕೌನ್ಸೆಲಿಂಗ್: | ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು |

ಅಪೂರ್ಣ ಅರ್ಜಿಗಳು ಮತ್ತು ಸಂಬಂದಪಟ್ಟ ದಾಖಲೆಗಳು ಇಲ್ಲದಿರುವ ಅರ್ಜಿಯನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಗಳನ್ನು ಸಂಪರ್ಕಿಸುವುದು.

1. ಅರ್ಹತೆ: ಅಭ್ಯರ್ಥಿಯು ಸ್ನಾತಕೋತ್ತರ ಪರೀಕ್ಷೆಯಲ್ಲಿ ಕನಿಷ್ಠ 55% ಅಂಕಗಳನ್ನು ಪಡೆದಿರಬೇಕು. (50% ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ / ಪ್ರವರ್ಗ-1 (ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು) ಅಥವಾ ತತ್ಸಮಾನ ಪದವಿಯಲ್ಲಿ ಅರ್ಹರಾಗಿರಬೇಕು.
2. ಕೊನೆಯ ದಿನಾಂಕದ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಒಮ್ಮೆ ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
3. ಅರ್ಜಿಗಳನ್ನು ಎಲ್ಲಾ ಕಛೇರಿ ದಿನಗಳಲ್ಲಿ ಬೆಳಿಗ್ಗೆ 10-30 ರಿಂದ ಸಂಜೆ 5-30 ಗಂಟೆವರೆಗೆ ಆಡಳಿತ ವಿಭಾಗದಲ್ಲಿ ಸ್ವೀಕರಿಸಲಾಗುವುದು.
4. ಮೀಸಲಾತಿ ಬಯಸುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ 5 ವರ್ಷದ ಜಾತಿ/ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಅಭ್ಯರ್ಥಿಗಳನ್ನು ಸಾಮಾನ್ಯ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು.
5. ಸರ್ಕಾರಿ ಸೇವೆಯಲ್ಲಿ ಇದ್ದಂತಹ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದ ಮುಖಾಂತರ ಒಪ್ಪಿಗೆ ಪಡೆದು ಅರ್ಜಿಯನ್ನು ಸಲ್ಲಿಸತಕ್ಕದ್ದು.
6. ಪ್ರವೇಶ ಪತ್ರವನ್ನು ಕುಲಸಚಿವರು ಆಡಳಿತ ವಿಭಾಗದಿಂದ ಖುದ್ದಾಗಿ ಪಡೆಯತಕ್ಕದ್ದು.
7. ಪೂರ್ಣಕಾಲಿಕ ಪಿಎಚ್.ಡಿ. ಬಯಸುವ ಅಭ್ಯರ್ಥಿಗಳು ಪಿಎಚ್.ಡಿ. ಅವಧಿಯಲ್ಲಿ ಯಾವುದೇ ಹುದ್ದೆಗೆ ಸೇರುವುದಿಲ್ಲವೆಂದು ಮುಚ್ಚಳಿಕೆ ಪತ್ರವನ್ನು ಸಲ್ಲಿಸತಕ್ಕದ್ದು.
8. ವಿಶ್ವವಿದ್ಯಾಲಯವು ಸೀಟುಗಳನ್ನು ಭರ್ತಿ ಮಾಡುವ ಮತ್ತು ಮಾಡದೇ ಇರುವ ಹಕ್ಕನ್ನು ಮಾರ್ಗದರ್ಶಕರ ಲಭ್ಯತೆ ಆಧಾರದ ಮೇಲೆ ಕಾಯ್ದಿರಿಸಿಕೊಂಡಿರುತ್ತದೆ.
9. ವಿದ್ಯಾರ್ಥಿಗಳು ಅಂಚೆ ಮೂಲಕ ಕಳುಹಿಸುವ ಅರ್ಜಿಗಳನ್ನು ಕುಲಸಚಿವರು ಆಡಳಿತ ವಿಭಾಗಕ್ಕೆ ನೇರವಾಗಿ ಸಲ್ಲಿಸತಕ್ಕದ್ದು.
10. ಪೂರ್ಣಕಾಲಿಕವಾಗಿ ಸಂಶೋಧನೆಯನ್ನು ಕೈಗೊಳ್ಳುವ ಅಭ್ಯರ್ಥಿಗಳಿಗೆ ಪ್ರಾಮುಖ್ಯತೆಯನ್ನು ನೀಡಲಾಗುವುದು.
11. ರಾಜ್ಯ ಸರ್ಕಾರದ ಮೀಸಲಾತಿ ನೀತಿಯನ್ವಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

**ಸೂಚನೆಗಳು:**

1. ಪ್ರಸ್ತುತ ಅಧಿಸೂಚನೆಯ ಅನ್ವಯ ಈಗಾಗಲೇ ಅರ್ಜಿ ಸಲ್ಲಿಸಿದವರು ಮತ್ತೆ ಅರ್ಜಿ ಸಲ್ಲಿಸುವಂತಿಲ್ಲ.
2. ಪ್ರವೇಶಾತಿ ಪರೀಕ್ಷೆಯು 100 ಅಂಕವುಳ್ಳ ಬಹು ಆಯ್ಕೆಯ ಪ್ರಶ್ನೆಗಳಾಗಿರುತ್ತದೆ. ಅದರಲ್ಲಿ 40 ಅಂಕಗಳು ಸಂಶೋಧನಾ ವಿಧಾನಕ್ಕೆ ಮತ್ತು 60 ಅಂಕಗಳು ಸಂಬಂಧಪಟ್ಟ ವಿಷಯದಾಗಿರುತ್ತದೆ. ಪರೀಕ್ಷೆಯ ಅವಧಿ 2.30 ಗಂಟೆಗಳಾಗಿರುತ್ತದೆ.
3. ಪಿಎಚ್.ಡಿ. ಪ್ರವೇಶಾತಿಗೆ ಅರ್ಹರಾಗಲು ಪ್ರವೇಶಾತಿ ಪರೀಕ್ಷೆಯಲ್ಲಿ ಅಭ್ಯರ್ಥಿಯು 100 ಅಂಕಗಳಿಗೆ ಕನಿಷ್ಠ 50 ಅಂಕಗಳನ್ನು (45 ಅಂಕಗಳು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಪ್ರವರ್ಗ-1) ಪಡೆಯತಕ್ಕದ್ದು.
4. ಸಂದರ್ಶನಕ್ಕೆ ಶೇಕಡ 30 ಅಂಕಗಳು ಮತ್ತು ಪ್ರವೇಶ ಪರೀಕ್ಷೆಗೆ ಶೇಕಡ 70 ಅಂಕಗಳನ್ನು ನಿಗದಿಗೊಳಿಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
5. ಆಯ್ಕೆ ಪಟ್ಟಿಯನ್ನು ಘೋಷಿಸುವ ಸಂದರ್ಭದಲ್ಲಿ ಯಾವುದೇ ಅಭ್ಯರ್ಥಿಗೆ ಸಮಾನ ಅಂಕಗಳು ಬಂದ ಪಕ್ಷದಲ್ಲಿ ಸ್ನಾತಕೋತ್ತರ ಪದವಿಯ ಅಂಕಗಳನ್ನು ಪರಿಗಣಿಸಲಾಗುವುದು.

6. ಪ್ರವೇಶ ಪರೀಕ್ಷೆಯಲ್ಲಿ ಮತ್ತು ಸಂದರ್ಶನದಲ್ಲಿ ತೇರ್ಗಡೆಯಾದವರು ಪಿಎಚ್.ಡಿ ಸಂಶೋಧನಾರ್ಥಿಯಾಗಿ ಆಯ್ಕೆಯಾಗುವುದಕ್ಕೆ ಅರ್ಹತೆ ಹೊಂದಿರುತ್ತಾರೆಯೆ ಹೊರತು ತೇರ್ಗಡೆಯಾದ ಎಲ್ಲಾ ಅಭ್ಯರ್ಥಿಗಳಿಗೆ ಪಿಎಚ್.ಡಿ. ಪದವಿ ಪ್ರವೇಶ ದೊರೆಯುವುದಿಲ್ಲ.

7. ಸೀಟುಗಳನನ್ನು ಭರ್ತಿ ಮಾಡುವ / ಮಾಡದೇ ಇರುವ ಹಕ್ಕನ್ನು ವಿಶ್ವವಿದ್ಯಾಲಯ ಹೊಂದಿರುತ್ತದೆ.

ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾಲಯದ ಕಛೇರಿಗೆ ಭೇಟಿ ನೀಡಿ ವಿಚಾರಿಸಬಹುದು ಅಥವಾ ಕುಲಸಚಿವರು ಆಡಳಿತ ಕಛೇರಿ ಮೊ. 8762600898 / 7899855189 / 8073131964 ರ ಮೂಲಕ ಸಂಪರ್ಕಿಸಬಹುದು.

20/2/2022

ಕುಲಸಚಿವರು
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ